## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸ್ಥೂಲಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ .

ಓದಲಾಗಿದೆ:

1. ಸರ್ಕಾರದ ಆದೇಶ ಸಂ.ನಅಇ 75 ಬೆಂರೂಪ್ರಾ 2003, ದಿನಾಂಕ 08.05.2003.
2. ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರ ಕಡತ ಸಂಖ್ಯೆ.ಬಿಎಂಐಸಿಎಪಿಎ:ಸ್ಥೂಅಯೋ:2003, ದಿನಾಂಕ 29.12.2003.
3. ಸದಸ್ಯ ಕಾರ್ಯದರ್ಶಿ, ಬಿಎಂಐಸಿಎಪಿಎ, ಬೆಂಗಳೂರು ಇವರ ಪತ್ರ ಸಂ. .ಬಿಎಂಐಸಿಎಪಿಎ:ಸ್ಥೂಅಯೋ:ಅಂತಿಮ:2003, ದಿನಾಂಕ 09.12.2003 ಮತ್ತು 09.01.2004.

...

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸ್ಥೂಲಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ.

1991ರ ಜನಗಣತಿಯಂತೆ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಜನಸಂಖ್ಯೆಯು 2.18 ಲಕ್ಷದಷ್ಟಿದ್ದು , ಮುಂದಿನ 20 ವರ್ಷಗಳ ಅವಧಿಗೆ ಅಂದರೆ 2021ರ ವೇಳೆಗೆ  ಯೋಜನೆಯಲ್ಲಿ ಪ್ರಸ್ತಾಪಿಸಿರುವ 5 ಟೌನ್‌ಶಿಪ್‌ಗಳನ್ನು ಒಳಗೊಂಡಂತೆ ಬರಬಹುದಾದ ಜನಸಂಖ್ಯೆ 10.05 ಲಕ್ಷವೆಂದು ಅಂದಾಜಿಸಿ ಈ ವ್ಯಾಪ್ತಿಯಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಈ ಕಾರಿಡಾರಿನಲ್ಲಿನ ವಾಹನ ಸಂಚಾರ ಸಮಸ್ಯೆಗಳನ್ನು ವಿಶ್ಲೇಷಿಸಿ ಯೋಜನಾ ತತ್ವ ಮತ್ತು ಸ್ಥೂಲಾಭಿವೃದ್ಧಿ ಯೋಜನೆ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ , 1961 ರ ಪ್ರಕರಣ 12 ರಲ್ಲಿ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ ಸ್ಥೂಲಾಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆಯೆಂದು, ಈ ಯೋಜನಾ ಪ್ರದೇಶದ ವ್ಯಾಪ್ತಿಯು 701.00 ಚ.ಕಿ.ಮೀ.ಗಳಿದ್ದು, 140 ಪೂರ್ಣ ಕಂದಾಯ ಗ್ರಾಮಗಳು, 54 ಭಾಗಶಃ ಗ್ರಾಮಗಳು ಮತ್ತು ಮದ್ದೂರು ಪಟ್ಟಣವು ಈ ಯೋಜನಾ ವ್ಯಾಪ್ತಿಗೆ ಒಳಪಟ್ಟಿರುತ್ತದೆಂದು, ಯೋಜನೆಯಲ್ಲಿ 111 ಕಿ.ಮೀ. ಉದ್ದದ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ, 41 ಕಿ.ಮೀ. ಉದ್ದದ ಫೆರಿಫೆರಲ್ ರಸ್ತೆ ನಿರ್ಮಾಣ, 9.10 ಕಿ.ಮೀ.ಉದ್ದದ ಲಿಂಕ್ ರಸ್ತೆ ನಿರ್ಮಾಣ ಹಾಗೂ 5 ಹೊಸ ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸುವುದೆಂದು ತಿಳಿಸುತ್ತಾ, ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಮುಂದಿನ ಬೆಳವಣಿಗೆಗಾಗಿ ಒಟ್ಟು 16256.22 ಹೆಕ್ಟೇರ್ ಪ್ರದೇಶವನ್ನು ಪ್ರಸ್ತಾಪಿಸಲಾಗಿದ್ದು , ಇದರಲ್ಲಿ ವಸತಿಗಾಗಿ 6291.88 ಹೆಕ್ಟೇರ್, ವಾಣಿಜ್ಯಕ್ಕಾಗಿ 2875.37 ಹೆಕ್ಟೇರ್, ಕೈಗಾರಿಕೆಗಾಗಿ 741.75 ಹೆಕ್ಟೇರ್, ಸಾರ್ವಜನಿಕ: ಅರೆ ಸಾರ್ವಜನಿಕ ಉದ್ದೇಶಕ್ಕಾಗಿ 552.43 ಹೆಕ್ಟೇರ್ ಉದ್ಯಾನ ಬಯಲು ಜಾಗಕ್ಕಾಗಿ, 1847.46 ಹೆಕ್ಟೇರ್, ಸಾರಿಗೆ ಮತ್ತು ಸಂಪರ್ಕಕ್ಕಾಗಿ, 3931.63 ಹೆಕ್ಟೇರ್ ಹಾಗೂ 5364.44 ಹೆಕ್ಟೇರ್ ಪ್ರದೇಶವನ್ನು ವ್ಯವಸಾಯ ವಲಯಕ್ಕಾಗಿ ಕಾಯ್ದಿರಿಸಿ ಅಂತಿಮವಾಗಿ ರೂಪಿಸಲಾಗಿದೆಯೆಂದು ತಿಳಿಸಿರುತ್ತಾರೆ. ಹಾಗೂ ಈ ಯೋಜನೆಯ ಬಗ್ಗೆ ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳನ್ನು ನೀಡಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿ ಒಟ್ಟು 37 ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಅವುಗಳನ್ನು ದಿನಾಂಕ 06.08.2003 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ಈ ಬಗ್ಗೆ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಸ್ಥೂಲಾಭಿವೃದ್ಧಿ ಯೋಜನೆಯಲ್ಲಿ ಸೂಕ್ತ ಬದಲಾವಣೆ ಮಾಡಲಾಗಿದೆಯೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 75 ಬೆಂರೂಪ್ರಾ 2003, ಬೆಂಗಳೂರು ದಿನಾಂಕ 12.02.2004**

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸ್ಥೂಲಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 13(3) ರನ್ವಯ ಅಂತಿಮ ಅನುಮೋದನೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ರಿಟ್ ಅರ್ಜಿ ಸಮ.17823:99 ರಲ್ಲಿ ಉಚ್ಚ-ನ್ಯಾಯಾಲಯವು ನೀಡಿರುವ ಆದೇಶದನ್ವಯ ಗೊಟ್ಟಿಗೆರೆ ಕೆರೆಯನ್ನು ವಿಭಜಿಸದೇ ಹಾಗೂ ಕೆರೆಯ ಒಳಹರಿವಿಗೆ ಯಾವುದೇ ಅಡಚಣೆಯಾಗದಂತೆ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿದ ರಸ್ತೆಯಲ್ಲಿ ರಸ್ತೆ ಪಂಕ್ತೀಕರಣ ಮತ್ತು ನಿರ್ಮಾಣದ ವಿಧಾನವನ್ನು ಅನುಸರಿಸಿ ನಂದಿ ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಸಂಸ್ಥೆಯು ರಸ್ತೆಯನ್ನು ನಿರ್ಮಾಣಗೊಳಿಸತಕ್ಕದ್ದು.
2. ಯೋಜನೆಯ ವರದಿ ಪುಟ ಸಂ.81 ಮತ್ತು 82 ರಲ್ಲಿ (1) ಪ್ಯಾರಾ 4.03.1 ಗ ರಲ್ಲಿ ಅಪ್ರೂವಲ್ ಟು ಸೆಲ್ಫ್ ಸೆಸ್ಟೇನಬಲ್ ಟೌನ್‌ಶಿಪ್ ಆಫ್ ಬಿಎಂಐಸಿಪಿ ಶೀರ್ಷಿಕೆಯಲ್ಲಿ ರೆಗ್ಯುಲೇಷನ್ ಆಫ್ ಟೌನ್‌ಶಿಪ್‌ನಲ್ಲಿ ಅಂಶಗಳನ್ನು ಮಾತ್ರ ಅಳವಡಿಸಿಕೊಳ್ಳತಕ್ಕದ್ದು.

" The minimum size of township shall be 400 Hectares"

iii) ಪ್ಯಾರಾ 4.03.-I-II ರಲ್ಲಿ ಈ ಕೆಳಕಂಡ ನಿಬಂಧನೆಗಳನ್ನು ಅಳವಡಿಸಿಕೊಳ್ಳತಕ್ಕದ್ದು.

a) The residential sital area of BMICP township shall not exceed 55% .
b) A minium 10% of the total area shall be reserved for parks, playgrounds and open space.
c) A minimum 5% of the total area shall be reserved for civic amenities.
d) The minimum width of road shall be 10 mtrs.

3. ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಕೃಷ್ಣರಾಜಪುರ ಗ್ರಾಮದ ಸ.ನಂ.14 ,19 ಮತ್ತು 21ರ ಜಮೀನುಗಳನ್ನು ವಸತಿ ಉಪಯೋಗಕ್ಕಾಗಿ ಕಾಯ್ದಿರಿಸಲಾಗಿದೆ.

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸ್ಥೂಲಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಮತ್ತು ಎಲ್ಲಾ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ
(ವಿ.ಶ್ರೀಧರ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

**'ನಕಲು'**

circular/kamuda